ದಿನಾಂಕಃ 25.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 2 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದ:**

ಕರಿಯಯ್ಯ ರವರಿಗೆ 5 ಜನ ಮಕ್ಕಳು. ಅವರುಗಳೆಂದರೆ ಶೇಶಮ್ಮ, ಜಾನಯ್ಯ, ಮುತ್ತಯ್ಯ, ಹಾಲಮ್ಮ ಮತ್ತು ಸೀತಮ್ಮ. ಶೇಶಮ್ಮ ರವರು ಮದುವೆಯಾದ ನಂತರ ಮರಣಹೊಂದಿರುತ್ತಾರೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಲಾಗಿರುವುದಿಲ್ಲ. ಮುತ್ತಯ್ಯ ಎಂಬುವವರು ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿಯವರು ಪತ್ನಿ ಬದುಕಿರುತ್ತಾರೆ. 1 ನೇ ಪ್ರತಿವಾದಿಯವರು ಕರಿಯಯ್ಯ ರವರ ಮಗಳು ಎಂದರೆ ಸರಿಯಲ್ಲ. ಮುತ್ತಯ್ಯ ಎಂಬುವವರಿಗೆ 3 ಜನ ಮಕ್ಕಳು. ಸದರಿಯವರಿಗೆ ಮಂಜುನಾಥ್ ಎಂಬ ಮಗ ಇರುತ್ತಾರೆ ಎಂದರೆ ಸರಿ. ಸದರಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಮೋಟಮ್ಮ ಎಂಬುವವರು ಮುದ್ದಯ್ಯ ರವರ ಪತ್ನಿ. ನನ್ನ ತಾಯಿಯ ಹೆಸರು ಮೋಟಮ್ಮ. ಈರಮ್ಮ ನನ್ನ ದೊಡ್ಡಮ್ಮ. ಜಾಣಯ್ಯ ಮತ್ತು ಮುತ್ತಯ್ಯ ಪ್ರಸ್ತುತವಾಗಿ ಬದುಕಿರುವುದಿಲ್ಲ ಎಂದರೆ ಸರಿ. ನನ್ನನ್ನು ಕೆಂಜಿಗೆ ಗ್ರಾಮಕ್ಕೆ ಮದುವೆಮಾಡಿಕೊಟ್ಟಿತ್ತಾರೆ. ನಾನು ಮದುವೆಯಾಗಿ 45 ವರ್ಷವಾಗಿರುತ್ತದೆ. ನನ್ನನ್ನು ನನ್ನ ತಂದೆಯೇ ಮದುವೆ ಮಾಡಿಕೊಟ್ಟಿತ್ತಾರೆ ಎಂದರೆ ಸರಿ. 9 ನೇ ಪ್ರತಿವಾದಿಯವರನ್ನು ಮತ್ತು ಶೇಶಮ್ಮ ಎಂಬುವವರು ನನ್ನ ತಂದೆ ಇರುವಾಗಲೇ ನಮ್ಮನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ. ಸದರಿ ಸಮಯದಲ್ಲಿ ಎಲ್ಲಾ ಆಸ್ತಿಗಳು ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ.

ನನ್ನ ಮದುವೆಯ ನಂತರ ನಾನು ಬಕ್ಕೀ ಗ್ರಾಮಕ್ಕೆ ಹೋಗಿ ಬರುತ್ತಿದ್ದೆ ಎಂದರೆ ಸರಿ. ಮುತ್ತಯ್ಯ ಮತ್ತು ಜಾಣಯ್ಯ ನನ್ನ ಸಹೋದರರು ಅವರು ಈ ಪೂರ್ವದಲ್ಲೇ ವಿಭಾಗವನ್ನು ಮಾಡಿಕೊಂಡಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ತಂದೆಗೆ ಒಟ್ಟು ಎಷ್ಟು ಎಕರೆ ಜಮೀನು ಇತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಮಗಳನ್ನು ಬಕ್ಕೀ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತೇವೆ. ನನ್ನ ಅಳಿಯನ ಹೆಸರು ದೇವರಾಜ ಎಂದರೆ ಸರಿ. ನನ್ನ ಅಳಿಯ ದೇವರಾಜ ಮತ್ತು 2 ನೇ ಪ್ರತಿವಾದಿಯವರ ನಡುವೆ ಹಿಂದಿನಿಂದಲೂ ದ್ವೇಶ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ನನ್ನ ಅಳಿಯನೊಟ್ಟಿಗೆ ಬಂದಿರುತ್ತೇನೆ. ನನ್ನ ಅಳಿಯ ಕೇಸನ್ನು ದಾಖಲಿಸಲು ಹೇಳಿದ ಕಾರಣ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಯಾವ ಕಾಲದಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಸದರಿ ವಿಷಯದ ಕುರಿತು ಈ ವಾದಪತ್ರದಲ್ಲಿ ಬರೆಸಿರುವ ಬಗ್ಗೆ ನೆನಪಾಗುತ್ತಿಲ್ಲ. ಸ.ನಂ.1/11, 3/7, 3/6 ಮತ್ತು ಸ.ನಂ.1 ರಲ್ಲಿ ನನ್ನ ತಂದೆಗೆ ಎಷ್ಟು ಎಕರೆ ಜಮೀನಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಎರಡು ಸ.ನಂ. ಗಳ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲು ಮಾಡಿರುತ್ತೇನೆ.

ಸದರಿ ಸ.ನಂ.1 ಮತ್ತು 2 ಆಗಿರುತ್ತದೆ. ಸದರಿ ಜಮೀನಿನ ವಿಸ್ತೀರ್ಣವು 1 ಎಕರೆ

ಇರಬಹುದು. ಗದ್ದೆ ಎರಡು ಎಕರೆ ವಿಸ್ತೀರ್ಣವಿರುತ್ತದೆ. ನಾನು 1 ಮತ್ತು 2 ಎಕರೆ ಜಮೀನಿಗೆ ವಿಭಾಗ ಕೋರಿರುತ್ತೇನೆ ಎಂದರೆ ಸರಿ. ಸ.ನಂ.1 ರ ದಕ್ಷಿಣಕ್ಕೆ ಯಾವ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ವಾದ ಪತ್ರದಲ್ಲಿ ಚೆಕ್ಕು ಬಂದಿಯ ಬಗ್ಗೆ ನಾನು ಹೇಳಿ ಬರೆಸಿರುವುದಿಲ್ಲ. ದಾವಾ ಸ್ವತ್ತು ನನ್ನ ತಂದೆಗೆ ಯಾವ ರೀತಿ ಬಂದಿರುತ್ತದೆ ಎಂದು ವಾದಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.